7) ಅಧ್ಯಕ್ಷರ ತೀರ್ಪು

ವಿಷಯ: ವಿಶ್ವವಿದ್ಯಾಲಯಗಳ ಜಂಟಿ ಸಲಹಾ ಸಮಿತಿಯ ವರದಿ ಬಗ್ಗೆ.

ಅಧ್ಯಕ್ಷರು: ನಾನು ಎರಡೂ ಕಡೆಯ ವಾದವನ್ನು ಆಲಿಸಿದ್ದೇನೆ. ಎಲ್ಲರೂ ಮಾತನಾಡಿದ್ದೀರಿ. ತಾಂತ್ರಿಕ ವಿಚಾರದ ಬಗ್ಗೆಯೇ ನಾನು ರೂಲಿಂಗ್ ಕೊಡುತ್ತಿದ್ದೇನೆ. The report of the Joint Select Committee is nothing but amendments suggested to the original Bill. ಜಂಟಿ ಸದನದ ಸಮಿತಿಯವರೇನು ವರದಿ ಮಾಡಿದ್ದಾರೆ ಅದರಲ್ಲೇ ವಿಧೇಯಕವೂ ಇದೆಯಲ್ಲಾ. The original Bill along with the amendments suggested by the Committee is to be taken into consideration. The Motion before the House is in order.

(ಗೊಂದಲ)

ಶ್ರೀ ಎ.ರಾಮದಾಸ್: ತಾವು ನೀಡಿರುವ ರೂಲಿಂಗ್ ಬಗ್ಗೆ ನಾವು ಹೇಳುತ್ತಿಲ್ಲ, ತಾವು ನೀರಾದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ. ಅದನ್ನು ಈಗ ತೆಗೆದುಕೊಳ್ಳಿ. ನಾಳೆ ವಿಧೇಯಕವನ್ನು ತೆಗೆದುಕೊಂಡರಾಯಿತು.

ಡಾ:ಜಿ.ಪರಮೇಶ್ವರ್: ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ ಕಾಗೇರಿ: ಇವತ್ತು ಆಗುವುದಿಲ್ಲ, ನಾಳೆ ಅದನ್ನು ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಅವರು ಐದು ನಿಮಿಷದಲ್ಲಿ ಮುಗಿಸುತ್ತಾರೆ, ತಾವು ನಾಳೆ ಮಾತನಾಡಿ.